**1** ನೇ  ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು  ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ

ಅಸಲು ದಾವಾ ಸಂ.**532/2025   P.W.-1**

ದಿನಾಂಕಃ 22-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಃ ವಾದಿ ಪರ ಎಸ್ ವಿ ಎ ವಕೀಲರಿಂದ

ಸಾಕ್ಷಿಯು  ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿದ್ದು ಅವುಗಳನ್ನು ಕಾಲಂ 1 ರಲ್ಲಿ ತೋರಿಸಿದಂತೆ ನಿಶಾನೆಗೊಳಿಸಲಾಗಿದೆ.

| 1 | 2 |
|---|---|
| ನಿಪಿ-1 | FIR  ಕಾಫಿಯ ಧೃಡೀಕೃತ ನಕಲು |
| ನಿಪಿ-2 | ಪೋಲೀಸ್ ಠಾಣೆಯಲ್ಲಿ ನೀಡಿದ ದೂರಿನ ಧೃಡೀಕೃತ ನಕಲು |
| ನಿಪಿ-3 | ಪ್ರಕಟಣೆಯ  ಧೃಡೀಕೃತ 3 ದಾಖಲಾತಿಗಳು |
| ನಿಪಿ-4 | ಪೋಲೀಸ್ ಅಧೀಕ್ಷಕರ ಕಛೇರಿಯಿಂದ ಆದ ಆದೇಶದ  ಧೃಡೀಕೃತ ನಕಲು |
| ನಿಪಿ-5 ಮತ್ತು 6 | 2 ಒರಿಜಿನಲ್ ಆಧಾರ್ ಕಾರ್ಡ್ |
| ನಿಪಿ-7 | ಕೆ ಆರ್ ತಿಪ್ಪೇಶ್ ರವರ ಗುರುತಿನ ಚೀಟಿ |
| ನಿಪಿ-8 | ಈರಮ್ಮನವರ ಗುರುತಿನ ಚೀಟಿ |
| ನಿಪಿ-9 | ಒರಿಜಿನಲ್ ರೇಷನ್ ಕಾರ್ಡ್ |
| ನಿಪಿ-10 | ಪತ್ರಿಕಾ ಪ್ರಕಟಣೆಯ ದಿನಪತ್ರಿಕೆ |
| ನಿಪಿ-11 | ವಂಶವೃಕ್ಷದ ಕಂಪ್ಯೂಟರೈಸಡ್ ಕಾಫಿ |
| ನಿಪಿ-12 | 3 ಛಾಯಾಚಿತ್ರಗಳು |
| ನಿಪಿ-13 | ಕಲಂ 80 ರಡಿಯಲ್ಲಿರುವ ನೀಡಿರುವ ನೋಟೀಸ್ |
| ನಿಪಿ-14 | 5 ಪೋಸ್ಟ್ರಲ್ ಅಕನಾಲೆಡ್ಜ್ಮೆಂಟ್ |
| ನಿಪಿ-15 | ಪೋಸ್ಟ್ರಲ್  ರೆಸಿಪ್ಟ್ |
| ನಿಪಿ-16 | ಡಿಜಿಟಲೈಸಡ್ ರಿಪ್ಲೆ ಕಾಪಿ |

ಪಾಟೀ ಸವಾಲುಃ ಪ್ರತಿವಾದಿ ಪರ **APP** ವಕೀಲರಿಂದ ಃ-

ನನ್ನ ತಂದೆಗೆ ನಾನು ಮೂರು ಜನ ಮಕ್ಕಳು.  ಮೊದಲನೆಯವರು ಲಲಿತಮ್ಮ,2 ನೇಯವರು ಕೆ ಟಿ ಯತೀಶ್ ಮತ್ತು 3 ನೇಯವರು ಕೆ.ಮಮತ,  ನನ್ನ ತಂದೆ ತಿಪ್ಪೇಶ್ ರವರಿಗೆ 60-70 ವಯಸ್ಸಾಗಿರುತ್ತದೆ ಎಂದರೆ ಸರಿ.  ನನ್ನ ತಾಯಿ ಈರಮ್ಮ

ರವರಿಗೂ 60-70 ವಯಸ್ಸಾಗಿರುತ್ತದೆ ಎಂದರೆ ಸರಿ. ನನ್ನ ತಂದೆ ತಾಯಿ ನನ್ನ ಜೊತೆ ವಾಸವಾಗಿದ್ದರು. ನನ್ನ ತಂದೆ ತಾಯಿಗೆ ವಯಸ್ಸಾಗಿದ್ದು, ಚಿಕಿತ್ಸೆಗಾಗಿ ಮಲೆನಾಡು ಆಸ್ಪತ್ರೆಗೆ ದಾಖಲು ಆಗಲು ಹೋಗಿದ್ದರೂ ಎಂದರೆ ಸರಿ. ಅವರಿಗೆ ವಯಸ್ಸಾದ ಕಾರಣ ನೀವುಗಳು ಅವರ ಜೊತೆ ಹೋಗಬೇಕಾಗಿತ್ತು ಎಂದರೆ ಸಾಕ್ಷಿ ಯಾವಗಲೂ ಅವರೇ ಹೋಗುತ್ತಿದ್ದರು ಎಂದು ನುಡಿದಿರುತ್ತಾರೆ. ನಿಮ್ಮ ತಂದೆ ತಾಯಿಗೆ ವಯಸ್ಸಾಗಿದ್ದು ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವ ಜವಬ್ದಾರಿ ನಿಮಗಿದ್ದು, ನಿಮ್ಮ ಜೊತೆ ಕರೆದುಕೊಂಡು ಹೋಗದೇ ನಿರ್ಲಕ್ಷತನ ತೋರಿಸಿರುತ್ತಾರೆ ಎಂದರೆ ಇಲ್ಲ ಎಂದು ನುಡಿದಿರುತ್ತಾರೆ. ಪೋಲೀಸ್ ಠಾಣೆಯಲ್ಲಿ ನಿಮ್ಮ ತಂದೆ ತಾಯಿ ಕಾಣೆಯಾಗಿದ್ದಾರೆ ಎಂದು ಪೋಲೀಸರ ಬಳಿ ವಿಚಾರ ಮಾಡಿದ್ದೀರಾ ಎಂದರೆ ಸಾಕ್ಷಿಯು ಹಲವಾರು ಬಾರಿ ವಿಚಾರ ಮಾಡಿರುತ್ತೇವೆ ಎಂದು ನುಡಿದಿರುತ್ತಾರೆ. ನಿಮ್ಮ ತಂದೆ ತಾಯಿಯನ್ನು ಹುಡುಕಲು ಪ್ರಮಾಣಿಕವಾಗಿ ಪ್ರಯತ್ನಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ತಂದೆ ತಾಯಿಯ ಹೆಸರಿನಲ್ಲಿ ಜಮೀನಿನ ಖಾತೆ ಇದ್ದು, ಹಾಗೂ ಎಲ್ ಐ ಸಿ ಹಣ ವನ್ನು ಪಡೆದುಕೊಳ್ಳಬೇಕೆಂಬ ಉದ್ದೇಶದಿಂದ ಈ ದಾವೆಯನ್ನು ಹೂಡಿದ್ದೀರಾ ಎಂದರೆ ಸರಿಯಲ್ಲ. ನಿಮ್ಮ ತಂದೆ ತಾಯಿಯ ನೋಡಿಕೊಳ್ಳುವ ಜವಬ್ದಾರಿ ನಿಮ್ಮದಾಗಿದ್ದು, ಆದರೆ ಅದನ್ನು ನೀವು ಸರಿಯಾಗಿ ಪಾಲಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

ಸಹಿ/-
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ರವರು, ತರೀಕೆರೆ.